## ಉತ್ತಮ ಸಂದರ್ಶನ

**ಚಂ**ದನ ವಾಹಿನಿಯಲ್ಲಿ ಏಪ್ರಿಲ್ 14ರಂದು ಚಾಂದನಿ ಎಂಬುವವರ ಪರಿಚಯವನ್ನು ಎಚ್.ಎನ್. ಆರತಿಯವರು ಮಾಡಿಕೊಟ್ಟರು. ಬಾಲ್ಯದಲ್ಲಿ ಗಂಡಾಗಿ ಹುಟ್ಟಿ, ನಂತರ ದಿನಗಳಲ್ಲಿ ಹೆಣ್ಣಾಗಿ ಪರಿವರ್ತನೆಗೊಂಡು, ಸಮಾಜದಲ್ಲಿ ಅನುಭವಿಸಿದ ನೋವು, ವ್ಯಥೆಗಳ ಕಥನವನ್ನು ಬಿಚ್ಚಿಟ್ಟರು.

ನಂತರ ಸಮಾಜದಲ್ಲಿ ತನ್ನಂತೆ ಇರುವವರ ಜೊತೆಗೆ ಹೋರಾಟದಲ್ಲಿ ತೊಡಗಿದ ಚಾಂದನಿ ಉತ್ತಮ ಕವಯಿತ್ರಿಯಾಗಿ ಬೆಳೆದು ಬಂದರು. ನಿಜವಾಗಿಯೂ ಉತ್ತಮವಾದ ಕಾರ್ಯಕ್ರಮ ಇದಾಗಿತ್ತು. ಚಂದನವಾಹಿನಿಗೆ ಅಭಿನಂದನೆಗಳು.

-ಲಲಿತಾ ಅಂಬಾಗಿಲು, ಉಪ್ಪುಂದ

## ಶೋನಲ್ಲಿ ಅಡ್ಡಡ್ಡ ಪ್ರಶ್ನೆಗಳು

'ಪ್ಯಾಟಿ ಹುಡ್ಗೀರ್ ಹಳ್ಳಿ ಲೈಫು' ಶೋನಲ್ಲಿ ಆಟಗಾರರಿಗೆ ತುಂಬಾ ಹಿಂಸೆ ಕೊಡುವುದು, ಕಿರಿಕಿರಿಯಾಗುವ ಅಡ್ಡಡ್ಡ ಪ್ರಶ್ನೆ ಕೇಳುವುದರಿಂದ ವೀಕ್ಷಕರಿಗೂ ಹಿಂಸೆ ಹಾಗೂ ಕಿರಿ ಕಿರಿ ಎನಿಸುತ್ತದೆ. ಇವೆಲ್ಲವುಗಳಿಗೆ ಕಡಿವಾಣ ಹಾಕುವುದು ಒಳಿತು.

–ತುರಗಲ್ಲ ಉಮೇಶ, ಸಾಲಹಳ್ಳಿ

## ಕನ್ನಡಾಭಿಮಾನ!

**ಕ**ಲರ್ಸ್ ಕನ್ನಡ ವಾಹಿನಿಯಲ್ಲಿ ಮೂಡಿ ಬಂದ ಪುನೀತ್ ರಾಜ್ ಕುಮಾರ್ ಅವರ 'ಫ್ಯಾಮಿಲಿ ಪವರ್' ಕಾರ್ಯಕ್ರಮದಲ್ಲಿ ಇತ್ತೀಚೆಗೆ ಜರ್ಮನ್ ದೇಶದ ಯುವಕ ಪಾಲ್ಗೊಂಡಿದ್ದ. ಆತ ಕಾರ್ಯಕ್ರಮದುದ್ದಕ್ಕೂ ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸಿದ್ದು ಹಾಗೂ ಕನ್ನಡದ ಒಂದೆರಡು ಚಿತ್ರ ಗೀತೆಗಳನ್ನು ಹಾಡಲು ಮುಂದಾಗಿದ್ದು 'ಮನಸ್ಸಿದ್ದರೆ ಮಾರ್ಗ' ಎಂಬುದಕ್ಕೆ ಸಾಕ್ಷಿ.

ರಾಜ್ಯ ರಾಜಧಾನಿಯಲ್ಲಿ ಅನ್ಯ ರಾಜ್ಯಗಳ, ಅನ್ಯ ಭಾಷೆಗಳ ಮಂದಿ ನಿರಂತರವಾಗಿ ಹೆಚ್ಚುತ್ತಿರುವ ಸಂದರ್ಭದಲ್ಲಿ, ಕನ್ನಡವನ್ನು ಮಾತನಾಡುವ ಮಂದಿ ವಿರಳವಾಗುತ್ತಿದ್ದಾರೆ. ಪಠ್ಯ ಕ್ರಮದಲ್ಲಿ ವಿದೇಶಿ ಭಾಷೆಗಳಿಗೆ ಆದ್ಯತೆ ಹೆಚ್ಚಾಗಿದ್ದು ಕನ್ನಡಿಗರೇ ಮಾತೃಭಾಷೆಯನ್ನು ಕಡೆಗಣಿಸುತ್ತಿರುವ ವೈಖರಿಯನ್ನು ಗಮನಿಸಿದರೆ ಮುಂದಿನ ದಿನಗಳಲ್ಲಿನ ಬೆಳವಣಿಗೆಗಳನ್ನು ಊಹಿಸಿಕೊಳ್ಳುವುದೂ ಅಸಾಧ್ಯ. ಕನ್ನಡಾಭಿಮಾನ ಬೆಳೆಯಲು, ಮನಸ್ಸು ಮುಖ್ಯ ಎಂಬುದನ್ನು ಜರ್ಮನ್ ಯುವಕ ತೋರಿಸಿಕೊಟ್ಟಿದ್ದಾನೆ.

-ರಾಜೀವ್ ಎನ್. ಮಾಗಲ್, ಹಾಸನ

ವಾರದ ಪತ್ರ

## ಧಾರಾವಾಹಿಯಲ್ಲಿ ದ್ವೇಷ ನಿಲ್ಲಲಿ

**ದೂ**ರದರ್ಶನ ಒಂದು ಪ್ರಭಾವಶಾಲಿ ಮಾಧ್ಯಮ. ಅಬಾಲವೃದ್ಧರಾದಿಯಾಗಿ ಇದನ್ನು ಪ್ರತಿನಿತ್ಯ ತಮ್ಮ ಮನೋರಂಜನೆಗಾಗಿ, ಜ್ಞಾನವೃದ್ಧಿಗಾಗಿ ಅಥವಾ ಹಾಗೆ ಸುಮ್ಮನೆ ಸಮಯ ಕಳೆಯುವುದಕ್ಕಾಗಿ ವೀಕ್ಷಿಸುತ್ತಿದ್ದಾರೆ. ಇದರಲ್ಲಿ ನೂರಾರು ಚಾನೆಲ್‌ಗಳಿದ್ದು ನಾವು ಯಾವುದನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದಾದರೂ ಬೆಳಗ್ಗೆಯಿಂದ ಸಂಜೆಯವರೆಗೂ ದುಡಿದು ಸುಸ್ತಾದ ಮಧ್ಯವಯಸ್ಕರು, ಜೀವನದ ಜಂಜಾಟ ಮುಗಿಸಿ ಹೈರಾಣಾಗಿರುವ ವೃದ್ಧರು, ತಂದೆ–ತಾಯಿಯ ಜೊತೆ ಕುಳಿತು ಟಿವಿ ನೋಡುವ ಮಕ್ಕಳು ಮನಸ್ಸಿನ ನೆಮ್ಮದಿಗಾಗಿ ಹೆಚ್ಚಾಗಿ ವೀಕ್ಷಿಸುವುದು ಧಾರವಾಹಿಗಳನ್ನು.

ಆದರೆ ವಿಪರ್ಯಾಸವೆಂದರೆ ಈಗಿನ ಧಾರಾವಾಹಿಗಳ ನಿರ್ಮಾಪಕರು ವೀಕ್ಷಕನಿಗೆ ಏನು ಬೇಕು ಎಂಬುದು ಅರ್ಥವಾಗದಂತೆ ವರ್ತಿಸುತ್ತಿದ್ದಾರೆ. ಸುಳ್ಳು, ದ್ವೇಷ , ಕ್ರೌರ್ಯ, ಕೊಲೆ, ಮೂಢನಂಬಿಕೆ.. ಇವುಗಳೇ ಕಥೆಯ ಮೂಲ ಸರಕು. ಹೆಣ್ಣನ್ನು ಸಂಸಾರದ ಹುಣ್ಣು ಎಂಬಂತೆ ಬಿಂಬಿಸಲಾಗುತ್ತಿದೆ. ನಿರಂತರವಾಗಿ ಕೆಟ್ಟ ವಿಚಾರಗಳು ಮನಸ್ಸಿನ ಮೇಲೆ ದಾಳಿ ಇಡುತ್ತಿರುವುದರಿಂದ ವೀಕ್ಷಕರ ಮನಸ್ಸು ರಾಡಿಯಾಗುತ್ತಿದೆ. ಮನುಷ್ಯ ಸಂಬಂಧಗಳ ಬಗ್ಗೆ ನಂಬಿಕೆ ಕಳೆದುಹೋಗುತ್ತಿದೆ.

ದಯವಿಟ್ಟು ಇಂತಹ ಧಾರಾವಾಹಿಗಳನ್ನು ನಿಲ್ಲಿಸಿ. 'ಪಾಪ ಪಾಂಡು' ಅಂತಹ ಹಾಸ್ಯ, 'ಮಾಯಾಮೃಗ'ದಂತಹ ವೈಚಾರಿಕ, 'ಮೂಡಲಮನೆ'ಯಂತಹ ಸಾಂಸಾರಿಕ ಮತ್ತು ದೇಶಭಕ್ತಿ ಬಿಂಬಿಸುವ ಧಾರಾವಾಹಿಗಳು ಮೂಡಿಬರಲಿ.

-ಭಾರತಿ ಬಿ. ಎಸ್., ಬೆಂಗಳೂರು

## ಹಳೆಯ ಸಿನಿಮಾ ಪ್ರಸಾರ

'ಪಬ್ಲಿಕ್ ಮೂವೀಸ್' ಚಾನೆಲ್‌ನಲ್ಲಿ ಬೆಳಿಗ್ಗೆ 7ಕ್ಕೆ ಸೊಗಸಾದ ಹಳೆಯ ಕಪ್ಪು–ಬಿಳುಪು ಚಲನಚಿತ್ರಗಳು ಪ್ರಸಾರವಾಗುತ್ತಿವೆ. ಹಿಂದೆ ನಾವು ನೋಡಿದಂತಹ ಅನೇಕ ಉತ್ತಮ ಚಿತ್ರಗಳು ಪ್ರಸಾರವಾಗುತ್ತಿರುವುದು ನಮಗೆ ಸಂತಸ ತಂದಿದೆ. ಇದು ನಿಜಕ್ಕೂ ಒಳ್ಳೆಯ ಪ್ರಯತ್ನ.

–ಪಿ. ಗೋವಿಂದ ರಾಜ್, ಶಿವಮೊಗ್ಗ

## ಎಲ್ಲವೂ ಒಂದೇ!

ನಮ್ಮ ಟಿ.ವಿ. ವಾಹಿನಿಗಳು ಬೇರೆ ಒಂದು ವಾಹಿನಿಯ ಎಲ್ಲಾ ಕಾರ್ಯಕ್ರಮಗಳನ್ನು ನಕಲು ಮಾಡಿ ತಾವೇ ಮೊದಲು ಎನ್ನುವಂತೆ ಬಿಲ್ಡಪ್ ಕೊಟ್ಟುಕೊಂಡು ಪ್ರಸಾರ ಮಾಡುತ್ತಿವೆ. ಟಿ.ವಿ. ವೀಕ್ಷಕರಿಗೆ ಗೊತ್ತಾಗುವುದಿಲ್ಲವೆಂದು ಭಾವಿಸಿದಂತಿದೆ. ಜಾಹೀರಾತುಗಳ ಮತ್ತು ಜ್ಯೋತಿಷಿಗಳ ಹಾವಳಿಯಂತೂ ಮತ್ತಷ್ಟು ಜಾಸ್ತಿ ಆಗಿದೆ. ಇವರ ಒಗ್ಗರಣೆ ಮಾತು, ಬೂಟಾಟಿಕೆ ಮಾತುಗಳನ್ನು ಕೇಳಿ ಕೇಳಿ ವಾಕರಿಗೆ ಬರುತ್ತದೆ.

–ಮಾರುತಿ ಆರ್.ಕೆ., ಶಿವಮೊಗ್ಗ

## ವಿಶೇಷ ಕಾರ್ಯಕ್ರಮ

ಚಂದನದಲ್ಲಿ ದಿ.10 ಮತ್ತು 13ರಂದು 'ಶುಭೋದಯ ಕರ್ನಾಟಕ' ಕಾರ್ಯಕ್ರಮದಲ್ಲಿ ಪ್ರಸಾರ ಮಾಡಿದ ಸಿದ್ದು ಯಾಪಲ ಮತ್ತು ಕಲಬುರಗಿ ನಿವಾಸಿ ಬಾಬುರಾವ್ ದೇಶಮಾನ್ಯೆ ಕುಟುಂಬದ ಕುರಿತು ಕಾರ್ಯಕ್ರಮ ಅಪರೂಪದ್ದು.

ಸಿದ್ದು ಯಾಪಲ ಅವರು ಒಂದು ಹಳ್ಳಿಯಲ್ಲಿನ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಕನ್ನಡ ಮೀಡಿಯಂನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿ, ತಮ್ಮ ಮಕ್ಕಳಿಗೂ ಕನ್ನಡ ಮಾಧ್ಯಮದಲ್ಲಿ ಓದಿಸಿದ್ದಾರೆ. ಅವರ ಸಾಧನೆ, ಅವರ ಶ್ರಮ ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯ ಹಾಗೂ ಅನುಕರಣೀಯ.

ದೇಶಮಾನ್ಯೆ ಕುಟುಂಬದ ಸಹೋದರಿಯರು ತಮ್ಮ ಶ್ರಮ, ಛಲದಿಂದ ನ್ಯಾಯದ ಬದುಕನ್ನು ಗುರಿಯಾಗಿಸಿಕೊಂಡು, ಒಂದೊಂದು ಕ್ಷೇತ್ರದಲ್ಲಿ ಮಾಡಿದ ಸಾಧನೆ ಎಲ್ಲಾ ಜಾತಿ– ಮತದವರಿಗೆ ಸ್ಫೂರ್ತಿ ಹಾಗೂ ಅನುಕರಣೀಯ. ಈ ಎರಡು ಕಾರ್ಯಕ್ರಗಳು ನಮ್ಮ ದೂರದರ್ಶನದ ಅದ್ಭುತ ಕೊಡುಗೆ.

–ಎಸ್.ಸಿ. ರಮೇಶ್, ಶಿವಮೊಗ್ಗ

## ಧಾರಾವಾಹಿ ನಿಲ್ಲಿಸಿ!

ಹಲವು ವರ್ಷಗಳಿಂದ ಕಲರ್ಸ್‌ನಲ್ಲಿ ಪ್ರಸಾರವಾಗುತ್ತಿರುವ 'ಪುಟ್ಟಗೌರಿ ಮದುವೆ' ಮತ್ತು 'ಲಕ್ಷ್ಮಿ ಬಾರಮ್ಮ' ಧಾರಾವಾಹಿಗಳು ಯಾವುದೇ ಗೊತ್ತುಗುರಿಯಿಲ್ಲದೆ ಸಾಗುತ್ತಾ ವೀಕ್ಷಕರಿಗೆ ಬೋರು ಹೊಡೆಸುತ್ತಿವೆ. 'ಪುಟ್ಟಗೌರಿ..'ಯಲ್ಲಿ ಸಾಗರಿಗೆ ಗೌರಿ ಮೇಲಿನ ದ್ವೇಷದ ಕಿಚ್ಚು ಇನ್ನೂ ಆರಿಲ್ಲವೇನೋ! 'ಲಕ್ಷ್ಮಿ..'ದಲ್ಲಿ ಇನ್ನೊಬ್ಬಳ ಕಾಟ ಸಹಿಸಿಕೊಳ್ಳಬೇಕಾಗಿದೆ. ಈ ಎರಡೂ ಧಾರಾವಾಹಿಗಳನ್ನು ನಿಲ್ಲಿಸಿ ವೀಕ್ಷಕರಿಗೆ ಉಪಕರಿಸಿ.

–ಬಿ.ಚಾಮರಾಜ ಅರಸ್, ಮೈಸೂರು